ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**839**
ಸದಸ್ಯರ ಹೆಸರು	:	ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	20.09.2021
ಉತ್ತರಿಸುವ ಸಚಿವರು		ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

*****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನಿರಂತರ ಜ್ಯೋತಿ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಆಗಿರುವ ಕಾರ್ಯಪ್ರಗತಿಯೇನು; ಈ ಯೋಜನೆಗೆ ಕೇಂದ್ರ ಸರ್ಕಾರ ನೀಡಿರುವ ಅನುದಾನವೆಷ್ಟು;</td><td>ನಿರಂತರ ಜ್ಯೋತಿ ಯೋಜನೆಯು ರಾಜ್ಯದ ಬೆಸ್ಕಾಂ, ಸೆಸ್ಕ್, ಹೆಸ್ಕಾಂ ಮತ್ತು ಜೆಸ್ಕಾಂ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪ್ರತ್ಯೇಕ 11 ಕೆವಿ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಿ ಕೃಷಿ ಮತ್ತು ಕೃಷಿಯೇತರ ವಿದ್ಯುತ್ ಸ್ಥಾವರಗಳನ್ನು ಬೇರ್ಪಡಿಸುವ ಯೋಜನೆಯಾಗಿರುತ್ತದೆ.
ಸದರಿ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಕೃಷಿಯೇತರ ಸ್ಥಾವರಗಳಾದ ಗೃಹ ಬಳಕೆ, ವಾಣಿಜ್ಯ/ಕೈಗಾರಿಕೆ, ಕುಡಿಯುವ ನೀರಿನ ಯೋಜನೆ, ಬೀದಿ ದೀಪ ಇತ್ಯಾದಿ ಇವುಗಳಿಗೆ 24 ಗಂಟೆಗಳ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ನಿರಂತರ ಜ್ಯೋತಿ ಯೋಜನೆಯ ಕಾಮಗಾರಿಗಳ ಕಂಪನಿವಾರು ವಿವರಗಳು ಕೆಳಕಂಡಂತಿವೆ:-

<table>
<tr><th>ಕಂಪನಿ ಹೆಸರು</th><th>ನಿರಂತರ ಜ್ಯೋತಿ ಯೋಜನೆಯಡಿ ಪ್ರಸ್ತಾಪಿಸಿದ ಕಾಮಗಾರಿಗಳ ಸಂಖ್ಯೆ</th><th>ನಿರಂತರ ಜ್ಯೋತಿ ಯೋಜನೆಯಡಿ ಪೂರ್ಣಗೊಂಡ ಫೀಡರ್‌ಗಳ ಸಂಖ್ಯೆ</th></tr>
<tr><td>ಬೆಸ್ಕಾಂ</td><td>966</td><td>966</td></tr>
<tr><td>ಸೆಸ್ಕ್</td><td>367</td><td>367</td></tr>
<tr><td>ಹೆಸ್ಕಾಂ</td><td>558</td><td>558</td></tr>
<tr><td>ಜೆಸ್ಕಾಂ</td><td>351</td><td>351</td></tr>
</table>

ನಿರಂತರ ಜ್ಯೋತಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ.

ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ. ಆದಾಗ್ಯೂ, ಕೇಂದ್ರ ಸರ್ಕಾರದ ಯೋಜನೆಯಾದ ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಗ್ರಾಮೀಣ ಫೀಡರ್ ಗಳಲ್ಲಿ ಕೃಷಿ ಹಾಗೂ ಕೃಷಿಯೇತರ ಸ್ಥಾವರಗಳನ್ನು ಬೇರ್ಪಡಿಸಲು ಫೀಡರ್ ಬೇರ್ಪಡಿಸುವಿಕೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಅವುಗಳ ವಿವರಗಳು ಕೆಳಕಂಡಂತಿವೆ:-</td></tr>
</table>

...2

ಜಿಲ್ಲೆ	ಡಿಡಿಯುಜಿಜೆವೈ ಯೋಜನೆ ಯಡಿ ಪ್ರಸ್ತಾಪಿಸಿದ ಕಾಮಗಾರಿಗಳ ಸಂಖ್ಯೆ	ಡಿಡಿಯುಜಿಜೆವೈ ಯೋಜನೆಯಡಿ ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ (ಚಾಲನೆಗೊಳಿಸಿದ ಫೀಡರ್ ಗಳು)
ಶಿವಮೊಗ್ಗ	68	62
ಚಿಕ್ಕಮಗಳೂರು	56	52
ಒಟ್ಟು	**124**	**114**

ಸದರಿ ಯೋಜನೆಯ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ರೂ.265.30 ಕೋಟಿ ಮಂಜೂರಾಗಿದ್ದು, ಇದರಲ್ಲಿ ರೂ.159.18 ಕೋಟಿಗಳು ಕೇಂದ್ರ ಸರ್ಕಾರದ ಅನುದಾನವಾಗಿರುತ್ತದೆ. ಆಗಸ್ಟ್ 21ರ ಅಂತ್ಯಕ್ಕೆ ರೂ.142.34 ಕೋಟಿಗಳ ಅನುದಾನವು ಬಿಡುಗಡೆಯಾಗಿರುತ್ತದೆ.

ಆ) ಈ ಯೋಜನೆಯಲ್ಲಿ ಸರ್ಕಾರವು ಕೈಗೊಂಡಿರುವ ಒಟ್ಟು ಕಾಮಗಾರಿಗಳು ಸಂಖ್ಯೆ ಎಷ್ಟು; ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ನಿರಂತರ ಜ್ಯೋತಿ ಯೋಜನೆ ಮತ್ತು ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ) ಯಡಿ ಕೈಗೊಂಡ ಕಾಮಗಾರಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ.

ಇ) ವಿದ್ಯುತ್ ಸಂಪರ್ಕ ಇಲ್ಲದ ಕುಟುಂಬಗಳಿಗೆ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಾದ, ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ), ಸೌಭಾಗ್ಯ, ಡಿಡಿಜಿ (Decentralised Distributed Generation) ಮತ್ತು ಗ್ರಾಮಸ್ವರಾಜ್ ಅಭಿಯಾನ್ ಯೋಜನೆಗಳಡಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಬಿ.ಪಿ.ಎಲ್. ಕುಟುಂಬಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ:-

ಕಂಪನಿ ಹೆಸರು	**ಡಿಡಿಯುಜಿಜೆವೈ**	**ಸೌಭಾಗ್ಯ**	**ಡಿಡಿಜಿ**	**ಗ್ರಾಮ ಸ್ವರಾಜ್ ಅಭಿಯಾನ್**
ಬೆಸ್ಕಾಂ	105,990	-	-	-
ಮೆಸ್ಕಾಂ	32,572	5,670	-	-
ಸೆಸ್ಕ	37,534	4,138	3,456	-
ಹೆಸ್ಕಾಂ	88,442	80,011	-	-
ಜೆಸ್ಕಾಂ	3,802	62,804	-	21,513
ಒಟ್ಟು	**268,340**	**152,623**	**3,456**	**21,513**

...3

ಈ)	ಯಾವ ಕಾಲಮಿತಿಯೊಳಗೆ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಎಲ್ಲಾ ಬಡ ಕುಟುಂಬಗಳಿಗೆ ಉಚಿತವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು; ಇದಕ್ಕಾಗಿ ಸರ್ಕಾರದ ಕೈಗೊಂಡಿರುವ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)	ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸದಾಗಿ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸುವ ಅರ್ಜಿಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ.) ನಿಯಾಮಾವಳಿಯಂತೆ ವಿದ್ಯುತ್ ಸರಬರಾಜು ಕಂಪನಿಗಳು ನಿಯಮಾನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

ಸಂಖ್ಯೆ: ಎನರ್ಜಿ 219 ಇಬಿಎಸ್ 2021

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 839ಕ್ಕೆ ಅನುಬಂಧ

ನಿರಂತರ ಜ್ಯೋತಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಜಿಲ್ಲಾವಾರು ವಿವರಗಳು:-

ಕ್ರ. ಸಂ.	ಜಿಲ್ಲೆ	ನಿರಂತರ ಜ್ಯೋತಿ ಯೋಜನೆಯಡಿ ಪ್ರಸ್ತಾಪಿಸಿದ ಕಾಮಗಾರಿಗಳ ಸಂಖ್ಯೆ	ನಿರಂತರ ಜ್ಯೋತಿ ಯೋಜನೆಯಡಿ ಪೂರ್ಣಗೊಂಡ ಫೀಡರ್‌ಗಳ ಸಂಖ್ಯೆ
	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:		
1	ತುಮಕೂರು	300	300
2	ರಾಮನಗರ	102	102
3	ಬೆಂಗಳೂರು ಗ್ರಾಮಾಂತರ	101	101
4	ಕೋಲಾರ	99	99
5	ಚಿಕ್ಕಬಳ್ಳಾಪುರ	109	109
6	ದಾವಣಗೆರೆ	138	138
7	ಚಿತ್ರದುರ್ಗ	117	117
	ಒಟ್ಟು	**966**	**966**
	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ		
	ಮೈಸೂರು	111	111
	ಚಾಮರಾಜನಗರ	50	50
	ಮಂಡ್ಯ	85	85
	ಹಾಸನ	121	121
	ಒಟ್ಟು	**367**	**367**
	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:		
	ಬಾಗಲಕೋಟ	82	82
	ವಿಜಯಪುರ	98	98
	ಬೆಳಗಾವಿ	189	189
	ಧಾರವಾಡ	51	51
	ಗದಗ	47	47
	ಹಾವೇರಿ	91	91
	ಒಟ್ಟು	**558**	**558**
	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ:		
	ಬಳ್ಳಾರಿ	85	85
	ಬೀದರ	59	59
	ಗುಲ್ಬರ್ಗಾ	70	70
	ಕೊಪ್ಪಳ	38	38
	ರಾಯಚೂರು	75	75
	ಯಾದಗಿರಿ	24	24
	ಒಟ್ಟು	**351**	**351**
	ಒಟ್ಟು	**2,242**	**2,242**

..2

<u>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:</u>

<u>ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳು ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ಜಿಲ್ಲಾವಾರು ವಿವರಗಳು:-</u>

ಜಿಲ್ಲೆ	ಡಿಡಿಯುಜಿಜೆವೈ ಯೋಜನೆಯಡಿ ಪ್ರಸ್ತಾಪಿಸಿದ ಕಾಮಗಾರಿಗಳ ಸಂಖ್ಯೆ	ಡಿಡಿಯುಜಿಜೆವೈ ಯೋಜನೆಯಡಿ ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ (ಚಾಲನೆಗೊಳಿಸಿದ ಫೀಡರ್ ಗಳು)	ಡಿಡಿಯುಜಿಜೆವೈ ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ
ಶಿವಮೊಗ್ಗ	68	62	6
ಚಿಕ್ಕಮಗಳೂರು	56	52	4
ಒಟ್ಟು	**124**	**114**	**10**

***